**ಸಾಕ್ಷಿಯನ್ನು ದಿನಾಂಕ: 16-10-2025 ರಂದು ಕರೆಯಿಸಿ ಪ್ರಮಾಣ ವಚನ ನೀಡಲಾಯಿತು.**

**ಪಾಟೀಸವಾಲು: ವಾದಿ ಪರ ವಕೀಲರವರಿಂದ:**

ವಾದಿ ನನ್ನ ಸ್ವಂತ ಸಹೋದರಿ ಅಂದರೆ ಸರಿ. 2 ನೇ ಪ್ರತಿವಾದಿ ನನ್ನ ಸಹೋದರಿ ಅಂದರೆ ಸರಿ. ನನ್ನ ತಂದೆಗೆ ವಾದಿ ನಾನು ಮತ್ತು 2 ನೇ ಪ್ರತಿವಾದಿ ಹೊರತು ಪಡಿಸಿ ಬೇರೆ ಮಕ್ಕಳು ಇರುವುದಿಲ್ಲ ಅಂದರೆ ಸರಿ. ನನ್ನ ತಂದೆಯವರು 5 ಜನ ಅಣ್ಣ ತಮ್ಮಂದಿರು ಅವರೆಂದರೆ ನನ್ನ ತಂದೆ ಗುರುನಾಥಪ್ಪ, ಚೆನ್ನಬಸ್ಸಪ್ಪ, ಹಾಲಪ್ಪ, ಶಶಿರಾಜಪ್ಪ ಮತ್ತು ಶ್ರೀಧರಪ್ಪ. ಆ ಪೈಕಿ ಹಾಲಪ್ಪ ಮೃತ ಪಟ್ಟಿದ್ದು ಅವರ ಪತ್ನಿಯನ್ನು 4 ನೇ ಪ್ರತಿವಾದಿಯಾಗಿ ಕಾಣಿಸಲಾಗಿದೆ ಅಂದರೆ ಸರಿ. ಈ ದಾವೆ ಚಾಲ್ತಿಯಲ್ಲಿದ್ದಾಗ ಮೇಲೆ ಹೇಳಿದ ಶ್ರೀಧರಪ್ಪ ಕೂಡ ಮೃತ ಪಟ್ಟಿದ್ದ ಅವರ ಮಕ್ಕಳನ್ನು ಪಕ್ಷಕಾರರನ್ನಾಗಿ ಮಾಡಲಾಗಿದೆ ಅಂದರೆ ಸರಿ. ಮೃತ ಹಾಲಪ್ಪ ಮತ್ತು ಶ್ರೀಧರಪ್ಪ ಇವರಿಗೆ ಮೇಲೆ ಹೇಳಿದ ವಾರಸುದಾರರನ್ನು ಹೊರತು ಪಡಿಸಿ ಬೇರೆ ವಾರಸುದಾರರು ಇರುವುದಿಲ್ಲ ಅಂದರೆ ಸರಿ.

2. ಈ ದಾವೆಯಲ್ಲಿ 3 ರಿಂದ 6 ನೇ ಪ್ರತಿವಾದಿಗಳನ್ನು ಯಾಕೆ ಪಕ್ಷಗಾರರನ್ನಾಗಿ ಮಾಡಲಾಗಿದೆ ಎಂದು ನಾನು ತಿಳಿದುಕೊಂಡಿರುವುದಿಲ್ಲ. ದಾವಾ ಶೆಡ್ಯೂಲ್ ಐಟಂ ನಂ 7 ರಲ್ಲಿ ನನ್ನ ತಂದೆಗೆ ಹಾಗೂ ಅವರ ಅಣ್ಣ ತಮ್ಮಂದಿರಿಗೆ ಸಮನಾದ ಪಾಲು ಇದೆ ಅಂದರೆ ಸರಿ. ಆ 1 ಅಸ್ತಿ ಮಾತ್ರ ಜಂಟಿಯಾಗಿರುವುದು ಅಂದರೆ ಸರಿ. ಸದರಿ ಐಟಂ ನಂ 7 ರಲ್ಲಿ ನನ್ನ ತಂದೆ ಹಿಸ್ಸೆಗೆ ಬಂದ ಆಸ್ತಿಯಲ್ಲ ನನಗೆ ಮತ್ತು ನನ್ನ ಸಹೋದರಿಯರಿಗೆ ಸಮಪಾಲು ಇದೆ ಅಂದರೆ ಸರಿ. ದಾವಾ ಶೆಡ್ಯೂಲ್ ಐಟಂ 1 ರಿಂದ 6 ಇವು ನನ್ನ ತಂದೆಯ ಹೆಸರಿನಲ್ಲಿ ಇರುವುದು ಅಂದರೆ ಸರಿ. 1 ರಿಂದ 6 ನೇ ದಾವಾ ಅಸ್ತಿಗಳು ನನ್ನ ತಂದೆಯ ಪಾಲಿಗೆ ಬಂದ ಅಸ್ತಿಗಳು ಅಂದರೆ ಸರಿ.

3. 1 ರಿಂದ 6 ನೇ ದಾವಾ ಅಸ್ತಿಗಳಲ್ಲಿ ನನಗೂ ನನ್ನ ಸಹೋದರಿಯರಿಗೂ ಸಮಪಾಲು ಇದೆ ಅಂದರೆ ಅಂದರೆ ಸರಿ. ದಾವಾ ಅಸ್ತಿಗಳಿಗೆ ಸಂಬಂದಿಸಿದಂತೆ ನನ್ನ ಹಾಗೂ ನನ್ನ ಇಬ್ಬರೂ ಸಹೋದರಿಯರ ನಡುವೆ ಯಾವುದೇ ಪಾಲು ವಿಭಾಗ

ಅಗಿರುವುದಿಲ್ಲ ಅಂದರೆ ಸರಿ. ವಾದಿ ಹಾಗೂ 2 ನೇ ಪ್ರತಿವಾದಿಗೆ ಗೊತ್ತಾಗದಂತೆ ನಾನು ಇತ್ತೀಚೆಗೆ ನನ್ನ ಹೆಸರಿಗ ಪಹಣಿಯನ್ನು ಮುಟೇಶನ್ ಮಾಡಿಸಿಕೊಂಡಿದ್ದೇನೆ ಅಂದರೆ ಸರಿ. ವಾದಿ ಹಾಗೂ 2 ನೇ ಪ್ರತಿವಾದಿಯ ಹಕ್ಕನ್ನು ನಷ್ಟಗೊಳಿಸಲು ಮತ್ತು ಅವರಿಗೆ ಮೊಸ ಮಾಡಲು ನಾನು ನನ್ನ ಒಬ್ಬನೇ ಹೆಸರಿಗೆ ಪಹಣಿ ಖಾತೆ ಮಾಡಿಸಿಕೊಂಡಿದ್ದೆನೆ ಅಂದರೆ ಸರಿಯಲ್ಲ.

4. ಚಿಗಟೇರಿ ಗ್ರಾಮದಲ್ಲಿ 1 ನೇ ವಾರ್ಡಿನಲ್ಲಿರುವ ಡೋರ ನಂ 1/88 ಇದು ನನ್ನ ತಂದಯ ಅಸ್ತಿ ಅಂದರೆ ಸರಿ. ಚಿಗಟೇರಿ ಗ್ರಾಮದಲ್ಲಿರುವ ಸರ್ವೆ ನಂ 490/ಬಿ/2 ವಿಸ್ತೀರ್ಣ 6 ಸೆನ್ಸ ಇದು ಕೂಡ ನನ್ನ ತಂದೆಯ ಅಸ್ತಿ ಅಂದರೆ ಸರಿ. ನಾವು 9 ನೇ ದಾವಾ ಅಸ್ತಿಯನ್ನು 7 ನೇ ಪ್ರತಿವಾದಿಗೆ ಮಾರಾಟ ಮಾಡಿದ್ದೇವೆ ಅಂದರೆ ಸರಿಯಲ್ಲ. ನನ್ನ ತಂದೆ ಮಾರಾಟ ಮಾಡಿರುವರು. ನನ್ನ ತಂದೆ ಮಾರಾಟ ಮಾಡಿರುವರು ಎಂದು ಸುಳ್ಳು ಹೇಳುತ್ತಿದೇನೆ ಅಂದರೆ ಸರಿಯಲ್ಲ. ನಾನು ದಿನಾಂಕ 08.07.2011 ರಂದು ನಿಪಿ 1 ರಂತೆ 7 ನೇ ಪ್ರತಿವಾದಿಗೆ 9 ನೇ ದಾವಾ ಅಸ್ತಿಯನ್ನು ಮಾರಾಟ ಮಾಡಿದ್ದೇನೆ ಅಂದರೆ ಸರಿ. ನಾನು 7 ನೇ ಪ್ರತಿವಾದಿಗೆ 9 ನೇ ದಾವಾ ಅಸ್ತಿಯನ್ನು ಮಾರಾಟ ಮಾಡಿದ್ದರೂ ಕೂಡ ಮಾರಾಟ ಮಾಡಿರುವುದಿಲ್ಲವೆಂದು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ.

5. ಆ ಪ್ರಕಾರ ವಾದಿಯರಿಗೆ ಗೊತ್ತಾಗದಂತೆ ಖರೀದಿದಾರರ ಹೆಸರಿಗೆ ಪಹಣಿಯನ್ನೂ ಕೂಡ ಮಾಡಿಸಿದ್ದೇನೆ ಅಂದರೆ ಸರಿಯಲ್ಲ. ನಿಪಿ 3 ರಲ್ಲಿ ಖರೀದಿದಾರಾದ ಮಲ್ಲಿಕಾರ್ಜುನ ಇವರ ಹೆಸರು ಕಂಡು ಬರುವುದು ಅಂದರೆ ಸರಿ. ದಾವಾ ಅಸ್ತಿಗಳಲ್ಲಿ ಎಲ್ಲರೂಗೂ ಸಮಾನ ಹಕ್ಕು ಇದೆ ಎಂದು ಗೊತ್ತಿದ್ದರೂ ಸಹಿತ ಸುಳ್ಳು ದಾಖಲೆಗಳನ್ನು ಸೃಷ್ಟಿಸಿ 9 ನೇ ದಾವಾ ಅಸ್ತಿಯನ್ನು ಮಾರಾಟ ಮಾಡಿದ್ದೇನೆ ಅಂದರೆ ಸರಿಯಲ್ಲ. ಎಲ್ಲಾ ದಾವಾ ಅಸ್ತಿಗಳಲ್ಲಿ ವಾದಿಯರಿಗೆ ಸಮಾನ ಹಿಸ್ಸೆ ಇರುವುದು ಅಂದರೆ ಸರಿಯಲ್ಲ. ನಾನು ಹಾಜರು ಪಡಿಸಿರುವ ದಾಖಲೆಗಳು ವಾದಿಯರಿಗೆ ಬಂದನಕಾರಿ ಆಗುವುದಿಲ್ಲ ಅಂದರೆ ಸರಿಯಲ್ಲ.

**ಸಾಕ್ಷಿಯ ಸಹಿ** 16.10.2025

6. ವಾದಿಯರು ಹಾಜರು ಪಡಿಸಿರುವ ಪಹಣಿಗಳು ನಮ್ಮ ತಂದೆಯ ಹೆಸರಿನಲ್ಲಿ ಇವೆ ಅಂದರೆ ಸರಿ. ವಾದಿಯ ಗಂಡನು ಗಳಿಸಿದ ಅಸ್ತಿಗಳನ್ನು ಈ ದಾವೆಯಲ್ಲಿ ಸೇರಿಸುವ ಯಾವುದೇ ಕಾನೂನಾತ್ಮಕ ಅವಶ್ಯತೆ ಇರುವುದಿಲ್ಲ ಅಂದರೆ ಆ ಬಗ್ಗೆ ನನಗೆ ಗೊತ್ತಿರುವುದಿಲ್ಲ. ವಾದಿಯ ಹೆಸರಿನಲ್ಲಿ ಯಾವುದೇ ಕುಟುಂಬದ ಅಸ್ತಿಗಳು ಇರುವುದಿಲ್ಲ. ವಾದಿಯು ಮೆರಿಟ್ ಅಧಾರದ ಮೇಲೆ ಸರ್ಕಾರಿ ನೌಕರಿ ಗಳಿಸಿರುವರು ಅಂದರೆ ಸರಿ. ವಾದಿಯು ಪ್ರೀತಿಸಿ ಮದೆಯಾದ ಕಾರಣ ಇಲ್ಲಸಲ್ಲದ ಅರೋಪ ಮಾಡಿ ಸಾಕ್ಷಿ ಪ್ರಮಾಣ ಪತ್ರ ಸಲ್ಲಿಸಿದ್ದೇನೆ ಅಂದರೆ ಸರಿಯಲ್ಲ. ವಾದಿಗೆ ನಾನು ಸಾಕಷ್ಟು ಹಣವನ್ನು ಖರ್ಚು ಮಾಡಿದ ಬಗ್ಗೆ ದಾಖಲೆಗಳನ್ನು ನ್ಯಾಯಾಲಯಕ್ಕೆ ಸಲ್ಲಿಸಿರುವುದಿಲ್ಲ. ನಾನು ವಾದಿಗೆ ಯಾವುದೇ ಹಣವನ್ನು ಖರ್ಚು ಮಾಡಿರುವುದಿಲ್ಲ ಅಂದರೆ ಸರಿಯಲ್ಲ.

7. ವಾದಿಯು ತನ್ನ ಗಂಡನ ಚಿತಾವಣಿಮೇಲೆ ದಾವೆ ಸಲ್ಲಿಸಿರುವರು ಎಂದು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ಈ ಕೇಸಿನಲ್ಲಿ ಅವಶ್ಯಕೆ ಪಕ್ಷಗಾರರನ್ನು ಸೇರಿಸಿರುವುದಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ವಾದಿಯು ಎಲ್ಲಾ ಅವಶ್ಯಕ ಪಕ್ಷಗಾರರನುನ ಸೇರಿಸಿರುವರು ಅಂದರೆ ಸರಿಯಲ್ಲ. ನಾನು ಕುಟುಂಬದ ಖರ್ಚಿಗೆ ವಾದಿಯರು ವಿವಾಹವಾಗುವ ಪೂರ್ವದಲ್ಲಿ ಸಾಲವನ್ನು ಮಾಡಿದ್ದೇನ ಎಂದು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ಆ ಕುರಿತು ಯಾವುದೇ ದಾಖಲೆಗಳನ್ನು ಹಾಜರು ಪಡಿಸಿರುವುದಿಲ್ಲ. ವಾದಿಯ ಹಕ್ಕನ್ನು ನಷ್ಟಗೊಳಿಸಲು ಸುಳ್ಳು ಪ್ರಮಾಣ ಪತ್ರ ಸಲ್ಲಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ವಾದಿಯರಿಗೆ ದಾವಾ ಅಸ್ತಿಯಲ್ಲಿ ಸಮಾನ ಹಕ್ಕು ಇದೆ ಅಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

**( ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)**

**ಓ ಹೇ ಕೇ ಸರಿಯಿದೆ.**

16-10-2025

**ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ. ಹರಪನಹಳ್ಳಿ**

**ಸಾಕ್ಷಿಯ ಸಹಿ** 16.10.2025